ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 09–11–2018

## ಪತ್ರಿಕಾ ಅಮಂತ್ರಣ

1. **ಚಲನಚಿತ್ರ ರಸಗ್ರಹಣ ಶಿಬಿರ ಉದ್ಘಾಟನಾ ಸಮಾರಂಭ:**

**ಉದ್ಘಾಟನೆ:**
**ಗಿರೀಶ್ ಕಾಸರವಳ್ಳಿ, ಅಂತಾರಾಷ್ಟ್ರೀಯ ಖ್ಯಾತಿಯ ಹಿರಿಯ ಚಲನಚಿತ್ರ ನಿರ್ದೇಶಕರು**

**ಅಧ್ಯಕ್ಷತೆ:**
**ಡಾ ನಾಗತಿಹಳ್ಳಿ ಚಂದ್ರಶೇಖರ್, ಅಧ್ಯಕ್ಷರು, ಕರ್ನಾಟಕ ಚಲನಚಿತ್ರ ಅಕಾಡೆಮಿ**

**ಮುಖ್ಯ ಅತಿಥಿ:**
**ಎನ್. ಆರ್. ವಿಶುಕುಮಾರ್, ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

**ದಿನಾಂಕ: 10–11–2018, ಶನಿವಾರ, ಸಮಯ: ಬೆಳಿಗ್ಗೆ 10 ಗಂಟೆಗೆ**
**ಸ್ಥಳ: ಸುಲೋಚನಾ ಚಿತ್ರಮಂದಿರ, ವಾರ್ತಾಸೌಧ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**2. ಎರಡು ದಿನಗಳ ಮಕ್ಕಳ ಹಬ್ಬ 2018 :.**

**ಉದ್ಘಾಟನೆ:**

ಹೆಚ್.ಡಿ.ಕುಮಾರಸ್ವಾಮಿ, ಮುಖ್ಯಮಂತ್ರಿಗಳು

ಅಧ್ಯಕ್ಷತೆ:
ಆರ್.ರೋಷನ್ ಬೇಗ್, ಶಾಸಕರು ಶಿವಾಜಿನಗರ ವಿಧಾನಸಭಾ ಕ್ಷೇತ್ರ

ವಿಶೇಷ ಅತಿಥಿಗಳು:
ಹೆಚ್ ಎನ್ ಅನಂತ ಕುಮಾರ್,
ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು
ಡಿ. ವಿ. ಸದಾನಂದ ಗೌಡ,
ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವರು
ಡಾ.ಜಿ.ಪರಮೇಶ್ವರ್,
ಉಪ ಮುಖ್ಯಮಂತ್ರಿಗಳು

ಪ್ರಾಸ್ತಾವಿಕ ನುಡಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ:
ಡಾ. ಜಯಮಾಲ ರಾಮಚಂದ್ರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

ವಸ್ತು ಪ್ರದರ್ಶನ ಉದ್ಘಾಟನೆ:
ಶಿವಾನಂದ ಪಾಟೀಲ್,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಪುಷ್ಪ ಪ್ರದರ್ಶನದ ಉದ್ಘಾಟನೆ:
ಎಂ. ಸಿ. ಮನಗೊಳಿ, ತೋಟಗಾರಿಕಾ ಸಚಿವರು

ದಿನಾಂಕ: 10–11–2018    ಶನಿವಾರ, ಸಮಯ: ಬೆಳಿಗ್ಗೆ 10.30 ಗಂಟೆಗೆ
ಸ್ಥಳ:  ಬ್ಯಾಂಡ್ ಸ್ಟ್ಯಾಂಡ್, ಕಬ್ಬನ್ ಉದ್ಯಾನವನ, ಬೆಂಗಳೂರು–560001.

ವಿಶೇಷ ಸೂಚನೆ : ನವೆಂಬರ್ 10ರಂದು ಬೆಳಿಗ್ಗೆ 10 ಗಂಟೆಗೆ ಜಾಥಾ ಹಮ್ಮಿಕಳ್ಳಲಾಗಿದೆ. ನವೆಂಬರ್ 11 ರಂದೂ ದಿನವಿಡೀ ಕಾರ್ಯಕ್ರಮಗಳು ಇರುತ್ತವೆ.

3 ಹಜರತ್ ಟಿಪ್ಪು ಸುಲ್ತಾನ್ ಜಯಂತಿ

**ಉದ್ಘಾಟನೆ:**

**ಡಾ ಜಿ. ಪರಮೇಶ್ವರ್, ಉಪ ಮುಖ್ಯಮಂತ್ರಿಗಳು**

**ಅಧ್ಯಕ್ಷತೆ:**

**ಆರ್. ರೋಷನ್ ಬೇಗ್, ಶಾಸಕರು, ಶಿವಾಜಿನಗರ ವಿಧಾನಸಭಾ ಕ್ಷೇತ್ರ**

**ಮುಖ್ಯ ಅತಿಥಿಗಳು:**

**ಯು.ಟಿ.ಖಾದರ್, ವಸತಿ ಸಚಿವರು**

**ಬಿ.ಝಡ್.ಜಮೀರ್ ಅಹ್ಮದ್ ಖಾನ್, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು**

**ಡಾ ಜಯಮಾಲ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರು**

**ಗಂಗಾಂಬಿಕೆ ಮಲ್ಲಿಕಾರ್ಜುನ್, ಮಹಪೌರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ದಿನಾಂಕ:10–11–2018, ಶನಿವಾರ, ಸಮಯ: ಬೆಳಿಗ್ಗೆ: 11.30 ಗಂಟೆಗೆ**

**ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಂಗಳೂರು.**

2. ಕನ್ನಡ ಪುಸ್ತಕ ಪ್ರಾಧಿಕಾರದ "ನಿಮ್ಮ ಮನೆಗೆ ನಮ್ಮ ಪುಸ್ತಕ" ಕಾರ್ಯಕ್ರಮ

**ಪುಸ್ತಕಗಳೊಂದಿಗೆ:**

**ಡಾ. ವಸುಂಧರಾ ಭೂಪತಿ, ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ**

**ನಮ್ಮೊಂದಿಗೆ :**

**ಡಾ ಎಲ್.ಹನುಮಂತಯ್ಯ, ಸಾಹಿತಿಗಳು**

**ಕೆ. ವಿ. ನಾಗರಾಜಮೂರ್ತಿ, ರಂಗಕರ್ಮಿಗಳು**

**ದಿನಾಂಕ: 11–11–2018, ಭಾನುವಾರ ಸಮಯ: ಸಂಜೆ ಬೆಳಿಗ್ಗೆ: 11 ಗಂಟೆಗೆ**

ಸ್ಥಳ: ಗುಂಡೂರಾವ್ ಕಟ್ಟಡ, ಪಾಯಲ್ ಪ್ಯಾಲೇಸ್ ಹತ್ತಿರ ಅಗ್ರಹಾರ ದಾರಸಹಳ್ಳಿ, ಬೆಂಗಳೂರು–79

1. ಕನ್ನಡ ಪುಸ್ತಕ ಪ್ರಾಧಿಕಾರದ "ನಿಮ್ಮ ಮನೆಗೆ ನಮ್ಮ ಪುಸ್ತಕ" ಕಾರ್ಯಕ್ರಮ

ಪುಸ್ತಕಗಳೊಂದಿಗೆ:
ಡಾ. ವಸುಂಧರಾ ಭೂಪತಿ, ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ

ನಮ್ಮೊಂದಿಗೆ :
ಸುಧೀಂದ್ರ ಹಾಲ್ದೊಡ್ಡೇರಿ
ಡಾ.ಎನ್ ಗಾಯತ್ರಿ

ಅತಿಥೇಯರು:
ಡಾ.ಎಚ್.ಎಸ್.ಪ್ರೇಮ

ದಿನಾಂಕ: 10–11–2018, ಭಾನುವಾರ ಸಮಯ: ಸಂಜೆ 4–00 ಗಂಟೆಗೆ
ಸ್ಥಳ: ಸ್ಕೈಲೈನ್ ಸುರಭಿ ಅಪಾರ್ಟ್‌ಮೆಂಟ್ಸ್, ವಿದ್ಯಾಪೀಠ ರಸ್ತೆ, ಬನಶಂಕರಿ ಮೂರನೇ ಹಂತ, ಬೆಂಗಳೂರು–560 085

5.ಬೆಳ್ಳಿ ಸಿನಿಮಾ ಬೆಳ್ಳಿ ಮಾತು: "ಅಮ್ಮಚ್ಚಿಯೆಂಬ ನೆನಪು..." ಚಿತ್ರ ಪ್ರದರ್ಶನ ಹಾಗೂ ಸಂವಾದ
ಅಧ್ಯಕ್ಷತೆ:
ಡಾ ನಾಗತಿಹಳ್ಳಿ ಚಂದ್ರಶೇಖರ್, ಅಧ್ಯಕ್ಷರು, ಕರ್ನಾಟಕ ಚಲನಚಿತ್ರ ಅಕಾಡೆಮಿ

ಬೆಳ್ಳಿ ಮಾತು:
ಶ್ರೀಮತಿ ಚಂಪಾ ಶೆಟ್ಟಿ , ನಿರ್ದೇಶಕಿ

ಅತಿಥಿಗಳು:
ಡಾ ನಾ.ದಾಮೋದರ ಶೆಟ್ಟಿ, ಹಿರಿಯ ಸಾಹಿತಿಗಳು

**ದಿನಾಂಕ: 10–11–2018, ಶನಿವಾರ, ಸಮಯ: ಸಂಜೆ 5–00 ಗಂಟೆಗೆ**
**ಸ್ಥಳ: ಚಾಮುಂಡೇಶ್ವರಿ ಸ್ಟುಡಿಯೋ, ಮಿಲ್ಲರ್ಸ್ ರಸ್ತೆ, ಬೆಂಗಳೂರು**

## ಪತ್ರಿಕಾ ಪ್ರಕಟಣೆ

### ನವೆಂಬರ್ 12 ರಿಂದ 18 ರವರೆಗೆ ಕಂದಾಯ ಇಲಾಖೆಯಲ್ಲಿ ಕಡತ ವಿಲೇವಾರಿ ಸಪ್ತಾಹ : ಸಚಿವ ದೇಶಪಾಂಡೆ

**ಬೆಂಗಳೂರು, ನವೆಂಬರ್ 9, (ಕರ್ನಾಟಕ ವಾರ್ತೆ) :** ಒಂದು ವರ್ಷಕ್ಕಿಂತಲೂ ಹೆಚ್ಚು ಕಾಲದಿಂದ ಇತ್ಯರ್ಥವಾಗದೆ ಉಳಿದಿರುವ ಕಡತಗಳನ್ನು ವಿಲೇವಾರಿ ಮಾಡುವ ಸದುದ್ದೇಶದಿಂದ ನವೆಂಬರ್ 12 ರಿಂದ 18 ರವರೆಗೆ ಕಂದಾಯ ಇಲಾಖೆಯಲ್ಲಿ 'ಕಡತ ವಿಲೇವಾರಿ ಸಪ್ತಾಹ'ವನ್ನು ಆಚರಿಸಲಾಗುವುದು ಎಂದು ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಆರ್. ವಿ. ದೇಶಪಾಂಡೆ ಅವರು ಶುಕ್ರವಾರ ತಿಳಿಸಿದ್ದಾರೆ.

ಕಂದಾಯ ಇಲಾಖೆಯಲ್ಲಿ ಬಹಳಷ್ಟು ಕಡತಗಳು ನಿಗದಿತ ಅವಧಿಯಲ್ಲಿ ವಿಲೇವಾರಿಯಾಗದೆ ಇರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬರುತ್ತಿರುವ ಹಿನ್ನೆಲೆಯಲ್ಲಿ ಈ ಸಪ್ತಾಹವನ್ನು ಹಮ್ಮಿಕೊಳ್ಳಲಾಗುತ್ತಿದೆ ಈ ಅವಧಿಯಲ್ಲಿ ಸಾಮಾನ್ಯ ಕಡತಗಳ ಜೊತೆಗೆ ಸಮಸ್ಯಾತ್ಮಕ ಕಡತಗಳನ್ನು ಕೂಡ ವಿಲೇವಾರಿ ಮಾಡಲಾಗುವುದು. ಕಡತಗಳನ್ನು ಯಾವ ರೀತಿ ವಿಲೇವಾರಿ ಮಾಡಬೇಕೆಂಬ ಬಗ್ಗೆ ಪ್ರಾದೇಶಿಕ ಆಯುಕ್ತರು, ಇಲಾಖಾ ಮುಖ್ಯಸ್ಥರು ಮತ್ತು ಜಿಲ್ಲಾಧಿಕಾರಿಗಳು ತಮ್ಮ ಅಧೀನ ಸಿಬ್ಬಂದಿಗೆ ಸೂಕ್ತ ಮಾರ್ಗದರ್ಶನ ಮಾಡಲು ಸೂಚಿಸಲಾಗಿದೆ ಎಂದು ದೇಶಪಾಂಡೆ ಅವರು ಹೇಳಿದ್ದಾರೆ.

ಸಪ್ತಾಹದ ಕೊನೆಯ ದಿನವಾದ ನವೆಂಬರ್ 18 ರಂದು ಸಂಬಂಧಿಸಿದ ಎಲ್ಲಾ ಅಧಿಕಾರಿಗಳೂ ಸಪ್ತಾಹವು ಆರಂಭವಾದ ದಿನವಾದ ನವೆಂಬರ್ 12 ರಂದು ಬಾಕಿ ಇದ್ದ ಕಡತಗಳೆಷ್ಟು, ಸಪ್ತಾಹದ ಅವಧಿಯಲ್ಲಿ ತಮ್ಮ ವ್ಯಾಪ್ತಿಯಲ್ಲಿ ವಿಲೇವಾರಿ ಮಾಡಿರುವ ಕಡತಗಳೆಷ್ಟು ಮತ್ತು ಸಪ್ತಾಹದ ಕೊನೆಯ ಹೊತ್ತಿಗೆ ಇನ್ನೂ ಬಾಕಿ ಇರುವ ಕಡತಗಳೆಷ್ಟು ಎಂಬ ಸಂಪೂರ್ಣ ಮಾಹಿತಿಯನ್ನು socoord-rve@karnataka.gov.in ಗೆ ಕಡ್ಡಾಯವಾಗಿ ಲಿಖಿತ ರೂಪದಲ್ಲಿ

ಕಳುಹಿಸಬೇಕು ಎಂದು ಸಚಿವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

## AIR FORCE RECRUITMENT RALLY

**Bangalore, November 9 (karnataka Information):**
Indian Air Force is conducting a recruitment rally at **CHAMUNDI VIHAR STADIUM, NAZARBAD, MYSURU (KARNATAKA)** to select airmen in group 'Y' [IAF (s)] Trade as per following programme:

On 05 Dec 2018 physical fitness, Written Test, (AT-I,AT-II, DFT and Filling of forms on 06 Dec 18) in these 09 Districts Belagavi, Bagalkote, Vijayapura, Bidar, Kalaburagi, Yadgir, Raichur, Dharwad and Uttar Kannada (Karwar).

On 07 Dec 2018 physical Fitness, Written Test, (AT-I,AT-II, DFT and Filling of forms on 08 Dec 2018) in these 20 Districts Bengaluru, Ramanagara, Mandya, Kolar, Chikballapur, Chamarajnagar, Mysuru, Madikeri, Dakshin Kannada(Mangalore),Chickmagalur, Chitradurga, Tumkuru, Hassan, Gadag, Koppal, Haveri, Bellary, Davangere, Shimoga and Udupi.

NOTE: Candiadates who have passed the written test on 05 Dec 18 and 07 Dec 18 are to stay back on the following day of their written test for left over selection procedure.

Unmarried male indian citizen from the state of karnataka or completed PUC/10+2/ intermediate from Karnataka state only are eligible. Candidate should be born between **14 july 1998 to 26 jun 2002** (both days inclusive).

Mininum height-**152.5 cms**

Education qualification– **passed intermediate PUC/10+2/Intermediate/ equivalent examination with any stream/subjects with minimum 50% marks in aggregate and 50 % marks in English approved by Council of boards for** secondary education.

Eligible candidate should report to the rally venue before **09:00h on 05 Dec 18 and 07 Dec 18 (as per their District)** with original mark sheet and passing certificate of matriculation intermediate (10+2/IInd PUC and 04 self attested photocopies of all certificate, Domicile certificate ( for those candidates who have qualification at other place) and 08 copies of recent passport size coloured photographs.

for more details log on to indian Air Force website www.airmenselection.cdac.in or contact **07 Airmen selection Centre, No 1 cubbon road Bengaluru -56**0001. Telephone no 08025592199, e-mail co.7ask-ka@gov.in.

The candidates may also contact the nearest District Employment Officer.

---------------------------------------------------------------

**ಗುಣಮಟ್ಟದ ರಸ್ತೆಗಳಿಗೆ ಆದ್ಯತೆ: ಸಚಿವ ಹೆಚ್.ಎಂ. ರೇವಣ್ಣ**

ಬೆಂಗಳೂರು, ನವೆಂಬರ್ 9 (ಕರ್ನಾಟಕ ವಾರ್ತೆ) ಗುಣಮಟ್ಟದ ರಸ್ತೆ, ಸೇತುವೆ, ಇತ್ಯಾದಿ ನಿರ್ಮಾಣಕ್ಕೆ ಲೋಕೋಪಯೋಗಿ ಇಲಾಖೆ ಒತ್ತು ನೀಡಿ ಜನರ ಸುರಕ್ಷಣೆಯ ಹೊಣೆ ಹೊತ್ತಿದೆ ಎಂದು ಲೋಕೋಪಯೋಗಿ ಸಚಿವ ಎಚ್.ಎಂ..ರೇವಣ್ಣ ತಿಳಿಸಿದರು.

ಅವರು ಇಂದು ವಿಧಾನಸೌಧ ಮುಂಭಾಗದಲ್ಲಿ ಲೋಕೋಪಯೋಗಿ , ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರ

(PRAMC) ಕಾರ್ಯಚರಣೆ ಕೈಪಿಡಿ ಹಾಗೂ ಯೋಜನೆ ಮತ್ತು ರಸ್ತೆ ಆಸ್ತಿ ನಿರ್ವಹಣಾ ವ್ಯವಸ್ಥೆ(KRAMS) ಯ ತಂತ್ರಾಂಶ ಕೈಪಿಡಿ ಬಿಡುಗಡೆ ಮಾಡಿ ಮಾತನಾಡಿದರು.

ಹೊಸ ತಂತ್ರಜ್ಞಾನದಲ್ಲಿ 40 ಕಿ.ಮೀ ವರೆಗೆ ಒಮ್ಮೆಗೆ ಗುಣಪಟ್ಟ ಪರೀಕ್ಷಿಸುವ ಯಂತ್ರ ಬಂದಿದೆ. ರಸ್ತೆ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಮಾಡುವ ನಿಟ್ಟಿನಲ್ಲಿ ಹೊಸ ತಂತ್ರಜ್ಞಾನ, ತಂತ್ರಾಂಶ ಬಳಸಲಾಗುವುದು. 6900 ಕಿಮೀ ರಸ್ತೆಯನ್ನು ಕೆಶಿಪ್ ವತಿಯಿಂದ 3 ಹಂತಗಳಲ್ಲಿ 8400 ಕೋಟಿ ವೆಚ್ಚ ಮಾಡಿ ಅಭಿವೃದ್ಧಿಪಡಿಸಲಾಗಿದೆ. 4ನೇ ಹಂತದ 1,500 ಕಿಮೀ ರಸ್ತೆಯನ್ನು 6000 ಕೋಟಿ ವೆಚ್ಚದಲ್ಲಿ ಜನವರಿ ವೇಳೆಗೆ ಪೂರ್ಣಗೊಳಿಸಲಾಗುವುದೆಂದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಕಂದಾಯ ಸಚಿವರಾದ ಆರ್.ವಿ.ದೇಶಪಾಂಡೆ ಒಳ್ಳೆಯ ಗುಣಮಟ್ಟದ ವಸ್ತುಗಳನ್ನು ಉಪಯೋಗಿಸಿ ಗುಣಮಟ್ಟದ ರಸ್ತೆ ನಿರ್ಮಾಣಕ್ಕೆ ಇಲಾಖೆ ಪ್ರಾಶಸ್ತ್ಯ ನೀಡಬೇಕು, ಕಾಂಕ್ರೀಟ್ ರಸ್ತೆ ನಿರ್ಮಿಸಿದರೆ ಇನ್ನೂ ಒಳಿತು ಎಂದರು.

ಕಾರ್ಯಕ್ರಮದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ವಿಜಯಭಾಸ್ಕರ್, ಅಪರ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ ಕೆ.ಎಸ್.ಕೃಷ್ಣರೆಡ್ಡಿ ಮುಂತಾದವರು ಉಪಸ್ಥಿತರಿದ್ದರು.

## ನವೆಂಬರ್ 22 ರಂದು 'ಬಡವರ ಬಂಧು ಯೋಜನೆ' ಚಾಲ್ತಿ: ಸಚಿವ ಬಂಡೆಪ್ಪ ಖಾಶೆಂಪೂರ

ಬೆಂಗಳೂರು, 9ನವೆಂಬರ್ (ಕರ್ನಾಟಕ ವಾರ್ತೆ): ಗ್ರಾಮೀಣ ಮಹಿಳೆಯರಿಗೆ ಸ್ವಂತ ಉದ್ದಿಮೆ ಸ್ಥಾಪಿಸಲು, ಪಟ್ಟಣ ಪ್ರದೇಶಗಳ ಬೀದಿಬದಿ ವ್ಯಾಪಾರಿಗಳಿಗೆ ಆರ್ಥಿಕ ನೆರವು ನೀಡಿ ಅವರನ್ನು ಸ್ವಾವಲಂಭಿಗೊಳಿಸಲು 'ಬಡವರ ಬಂಧು' ಯೋಜನೆಗಳನ್ನು ಇದೇ ತಿಂಗಳ 22 ರಂದು ಬೆಂಗಳೂರಿನ ಎಪಿಎಂಸಿಯಲ್ಲಿ ಮುಖ್ಯಮಂತ್ರಿಗಳ ಉದ್ಘಾಟಿಸಲಿದ್ದಾರೆ ಎಂದು ಸಹಕಾರ ಸಚಿವರಾದ ಬಂಡೆಪ್ಪ ಖಾಶೆಂಪೂರ ತಿಳಿಸಿದ್ದಾರೆ.

ಅವರು ಇಂದು ವಿಕಾಸಸೌಧದಲ್ಲಿ ಈ ಕುರಿತು ಹಮ್ಮಿಕೊಳ್ಳಲಾದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಈ ಯೋಜನೆಯಡಿ ಶೂನ್ಯ ಬಡ್ಡಿಯಡಿ ಫಲಾನುಭವಿಗಳಿಗೆ ಸಾಲ ಮಂಜೂರು ಮಾಡಲಾಗುವುದು. ಪ್ರತಿ ಜಿಲ್ಲೆಯಲ್ಲೂ ಈ ಯೋಜನೆಗೆ ಬಂದು ಮೊಬೈಲ್ ವ್ಯಾನ್ ನೀಡಲಾಗುವುದು ಒಂದು ಬ್ಯಾಂಕ್ ನ್ನು ಪಡೆದು, ಆ ಮೂಲಕ ಸಾಲ ನೀಡಲಾಗುವುದೆಂದರು.

ಸಹಕಾರ ಇಲಾಖೆ ಈಗ ಕೃಷಿ ಸಾಲ, ಕೃಷಿಯೇತರ ಸಾಲ, ಹೈನುಗಾರಿಗೆ, ಪಟ್ಟಣ ಸಹಕಾರಿ ಬ್ಯಾಂಕಿಂಗ್ ಕ್ಷೇತ್ರಗಳಲ್ಲಿ ಸಾಧನೆ ಮಾಡಿದೆ. ಪ್ರಸ್ತುತ ಸರ್ಕಾರ ರೈತರಿಗೆ ಶೂನ್ಯ ಬಡ್ಡಿದರದಲ್ಲಿ 3 ಲಕ್ಷದವರೆಗೆ ಮತ್ತು ಶೇ.3ರ ಬಡ್ಡಿದರದಲ್ಲಿ 10 ಲಕ್ಷದವರೆಗೆ ಕೃಷಿ ಸಾಲ

ನೀಡುತ್ತಿದೆ. ಹೈನುಗಾರರಿಗೆ ಲೀಟರ್ ಒಂದಕ್ಕೆ 5 ರೂಪಾಯಿ ಸಹಾಯಧನ ನೀಡುತ್ತಿದೆ ಸರ್ಕಾರವು ರೈತರು ಸಹಕಾರ ಸಂಘ ಸಂಸ್ಥೆಗಳು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಪಡೆದಿರುವ ಅಲ್ಪಾವಧಿ ಸಾಲದಲ್ಲಿ 1 ಲಕ್ಷದವರೆಗೆ ಸಾಲ ಮುನ್ನಾ ಮಾಡಲಾಗಿದೆ. ರಾಜ್ಯದಲ್ಲಿ 42000 ಸಹಕಾರ ಸಂಘಗಳಿದ್ದು, ಇದರಲ್ಲಿ 2 ಕೋಟಿ 48 ಲಕ್ಷ ಸದಸ್ಯರಿದ್ದಾರೆ ಎಂದರು.

## ಸಹಕಾರ ಸಪ್ತಾಹ

ಸಹಕಾರ ಕ್ಷೇತ್ರದ ಸಾಧನೆಯನ್ನು ತಿಳಿಸಲು ಚಿಂತನ ಮಂಥನ ಕಾರ್ಯಕ್ರಮ ನಡೆಸಲು ನವೆಂಬರ್ 14 ರಿಂದ 20 ರವರೆಗೆ 65 ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ನಡೆಸಲಾಗುವುದು. ವಿವಿಧ ಸ್ಥಳಗಳಲ್ಲಿ ಈ ಸಪ್ತಾಹ ಹಮ್ಮಿಕೊಳ್ಳಲಾಗಿದ್ದು, ಈ ಅವಧಿಯಲ್ಲಿ ಸಭೆ, ಸಮ್ಮೇಳನ, ವಿಚಾರಗೋಷ್ಠಿಗಳು ನಡೆಯಲಿದೆ ಎಂದರು.

ಈ ಬಾರಿ ಸಪ್ತಾಹದ ಧ್ಯೇಯ, 'ಗ್ರಾಮೀಣ ಸಮೃದ್ಧಿಗಾಗಿ ಸಹಾಕಾರ ಸಂಸ್ಥೆಗಳ ಮೂಲಕ ಉತ್ತಮ ಆಡಳಿತ ಮತ್ತು ಸರ್ವರನ್ನೊಳಗೊಂಡ ಬೆಳವಣಿಗೆ' ಎಂಬುದಾಗಿದೆ .ಮುಖ್ಯಮಂತ್ರಿಗಳು ನವೆಂಬರ್ 14 ರಂದು ಬೀದರ್ ನಲ್ಲಿ ಸಪ್ತಾಹ ಉದ್ಘಾಟಿಸಲಿದ್ದಾರೆ. ನವೆಂಬರ್ 15 ರಂದು ಶಿರಸಿ, ಉತ್ತರ ಕನ್ನಡ, 16 ರಂದು ರಾಯಚೂರು, 17 ರಂದು ಬೆಂಗಳೂರು, 18 ರಂದು ಹಾವೇರಿ, 19 ರಂದು ಕೋಲಾರ, 20 ರಂದು ಶಿವಮೊಗ್ಗ ಜಿಲ್ಲೆಗಳಲ್ಲಿ ಸಹಕಾರ ಸಪ್ತಾಹ ಅಂಗವಾಗಿ ವಿಚಾರ ಸಂಕಿರಣಗಳ ನಡೆಯಲಿವೆ.

ಅಲ್ಲದೆ 6 ಜನ ಶ್ರೇಷ್ಠ ಸಹಕಾರಿಗಳನ್ನು ಗುರುತಿಸಿ 'ಸಹಕಾರ ರತ್ನ' ಪ್ರಶಸ್ತಿ ನೀಡಲಾಗುತ್ತಿದ್ದು, ನವೆಂಬರ್ 14 ರಂದು ಮುಖ್ಯಮಂತ್ರಿಗಳು ಸಹಕಾರ ಸಪ್ತಾಹದಲ್ಲಿ ಪ್ರಶಸ್ತಿ ಪ್ರಧಾನ ಮಾಡಲಿದ್ದಾರೆ ಎಂದರು.